ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.

**14**ನೇ ನವೆಂಬರ**, 2024**

ಸಿ**.** ಸಿ**.** ನಂ**. 1914 /2024**

| | |
|---|---|
| ದೂರುದಾರರು- | ರಾಜ್ಯದ ಪರವಾಗಿ ಖಡಕಲಾಟ ಪೊಲೀಸ್ ಠಾಣೆ |
| ವಿರುದ್ಧ | |
| ಆಪಾಧಿತರು- | 1. ಮಹಾಲಿಂಗ ಅಣ್ಣಪ್ಪ ಶಿರಗಾಂವಿ,<br>ವಯಸ್ಸುಃ **30** ವರ್ಷ**,** ಉಃ ಕಿರಾಣಿ ಅಂಗಡಿ**,**<br>ವಾಸಃ ಹತ್ತರವಾಟ ಹಾಲಿ ಕುಠಾಳಿ,<br>ತಾಃ ಚಿಕ್ಕೋಡಿ. |

ನಾನು ತೃಪ್ತಿ. ಧರಣಿ, ಬಿ.ಎ. ಎಲ್.ಎಲ್.ಎಂ., ಪ್ರಭಾರ ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ಗಳ ನ್ಯಾಯಾಲಯ, ಚಿಕ್ಕೋಡಿ, ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

## ದೋಷಾರೋಪಣೆ

1) ಆರೋಪಿಯಾದ ನೀವು ದಿನಾಂಕ 10.04.2024 ರಂದು 18-00 ಗಂಟೆ ಸುಮಾರಿಗೆ ಖಡಕಲಾಟ ಪೊಲೀಸ ಠಾಣಾ ಹದ್ದಿಯ ಪೈಕಿ ಕುಠಾಳಿ ಗ್ರಾಮದ ಖೋತ ಗಲ್ಲಿಯಲ್ಲಿರುವ ಆರೋಪಿಯಾದ ನಿಮ್ಮ ಕಿರಾಣಿ ಅಂಗಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಸರ್ಕಾರದ ಯಾವುದೇ ಅಧಿಕೃತ ಪರವಾನಿಗೆ ಪಡೆದುಕೊಳ್ಳದೇ ಒಂದು ಹಸಿರು ಗುಲಾಬಿ ಬಣ್ಣದ ಕೈಚೀಲದಲ್ಲಿ 90 ಎಂ ಎಲ್ ನ ಡಿ ಕೆ ಡಬಲ್ ಕಿಕ್ ಪೈನ್ ವಿಸ್ಕಿ ಕಂಪನೀಯ 14 ಟೆಟ್ರಾ ಪಾಕೇಟುಗಳ ಮದ್ಯವನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ **32(3)** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ-1) ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ ಆರೋಪಿಃ

ಪ್ರಶ್ನೆ-2) ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇಸನ್ನು ನಡೆಸುತ್ತೀರಾ?

ಉತ್ತರಃ ಆರೋಪಿಃ

(ಆಪಾದಿತರ ಹೇಳಿಕೆಗಳನ್ನು ನನ್ನ ಸಮ್ಮುಖದಲ್ಲಿ ಪಡದುಕೊಂಡಿದ್ದು ಸದರಿ ಹೇಳಿಕೆಗಳು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.)

**ಪ್ರಭಾರ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.**

3) ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವು ಅನಧಿಕೃತವಾಗಿ ಸರ್ಕಾರದ ಪರವಾನಿಗಿ ಇಲ್ಲದೆ ಈ ಮೇಲೆ ತಿಳಿಸಿದ ಮದ್ಯದ ಟೆಟ್ರಾ ಪೌಚ್ ಗಳನ್ನು ಮತ್ತು ಕಳ್ಳಭಟ್ಟಿ ಸರಾಯಿಯನ್ನು ಮಾನವ ಸೇವನೆಗೆ ಯೋಗ್ಯವಲ್ಲ

ಅಂತಾ ಗೊತ್ತಿದ್ದರೂ ನಿಮ್ಮ ಸ್ವಂತ ಪಾಯ್ದೆಗೋಸ್ಕರ ಯಾವುದೇ ಪರವಾಣಿಗೆ ಇಲ್ಲದೇ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿ ಇಟ್ಟುಕೊಂಡು, ಆ ಮೂಲಕ 1 ಮತ್ತು 2ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 272 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.